ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣ-ತುಂಗ ಆವರಣ, ಮಂತ್ರಾಲಯ ರಸ್ತೆ (ಎನ್.ಹೆಚ್. 167), ಯರಗೇರಾ-584133, ರಾಯಚೂರು, ಕರ್ನಾಟಕ
ಶೈಕ್ಷಣಿಕ ವಿಭಾಗ

E-mail: registrarrur@gmail.com Website: https://raichuruniversity.ac.in

ಸಂ:ರಾವಿರಾ/ಬಿ.ಇಡಿ/2023-24/1676 ದಿನಾಂಕ:13.03.2024

## ಸುತ್ತೋಲೆ

ವಿಷಯ: 2023-24ನೇ ಸಾಲಿನಲ್ಲಿ ಸರ್ಕಾರದ ಕೋಟಾದಡಿ ಹಂಚಿಕೆಯಾಗಿ ಖಾಲಿ ಉಳಿದ/ ಉಳಿಯುವ ಬಿ.ಇಡಿ. ಸೀಟುಗಳನ್ನು ಆಡಳಿತ ಮಂಡಳಿಯ ಕೋಟಾದಡಿ ಭರ್ತಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಇಡಿ 12 ಯುಜಿಹೆಚ್ 2024(ಇ) ದಿನಾಂಕ: 04.03.2024
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13.03.2024.

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಯಚೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುವ ಮತ್ತು NCTE ಮಾನ್ಯತೆ ಪಡೆದ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ 2023-24ನೇ ಸಾಲಿಗೆ ಹಂಚಿಕೆಯಾಗದೇ ಸರ್ಕಾರದ ಕೋಟಾದಡಿ (1) ಖಾಲಿ ಇರುವ ಹಾಗೂ (2) ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರುಹಂಚಿಕೆ ಅಥವಾ ಮರುಕೌನ್ಸಿಲಿಂಗ್ ನಂತರವೂ ಖಾಲಿ ಉಳಿದಿರುವ ಬಿ.ಇಡಿ ಸೀಟುಗಳನ್ನು ಆಯಾ ಕಾಲೇಜು ಆಡಳಿತ ಮಂಡಳಿಯವರು ದಿನಾಂಕ: **23.03.2024** ರವರೆಗೆ ಕರ್ನಾಟಕ ಸರ್ಕಾರದ Merit Cum Reservation Policy ಆಧಾರದ ಮೇಲೆ ಭರ್ತಿ ಮಾಡಿಕೊಂಡು ರಾಯಚೂರು ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಹಾಗೂ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಲು ಈ ಕೆಳಕಂಡ ಷರತ್ತು/ ನಿಭಂಧನೆಗೆ ಒಳಪಟ್ಟು ಅನುಮತಿ ನೀಡಲಾಗಿದೆ.

**ಷರತ್ತು/ ನಿಬಂಧನೆಗಳು:**

1. ಸರ್ಕಾರಿ ಕೋಟಾದಡಿ ಖಾಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಮೇಲೆ ವಿಶ್ವವಿದ್ಯಾಲಯಗಳು ನಿಗಾ ಇಡತಕ್ಕದ್ದು, ಭರ್ತಿ ಪ್ರಕ್ರಿಯೆಯಲ್ಲಿ ಲೋಪ/ ವ್ಯತಿಕ್ರಮ ಕಂಡುಬಂದಲ್ಲಿ ಸಂಬಂಧಿಸಿದ ಕಾಲೇಜುಗಳ ವಿರುದ್ಧ ವಿಶ್ವವಿದ್ಯಾಲಯಗಳು ಕಠಿಣ ಕ್ರಮ ಜರುಗಿಸತಕ್ಕದ್ದು.
2. ಸರ್ಕಾರಿ ಕೋಟಾದಡಿಯ ಖಾಲಿ ಸೀಟುಗಳ ಪ್ರವೇಶ ದಾಖಲಾತಿ ಪ್ರಕ್ರಿಯೆಯನ್ನು ಸಂದರ್ಭಾನುಸಾರ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಅಂತಿಮ ಕಾಲಾವಧಿ ಮತ್ತು ಅವಶ್ಯಕತೆಗಳಿಗನುಗುಣವಾಗಿ ವಿಸ್ತರಿಸಲಾಗುವ ಕಾಲಮಿತಿಯೊಳಗಾಗಿ ಮತ್ತು ಅವಶ್ಯಕತೆಗಳಿಗನುಗುಣವಾಗಿ ವಿಸ್ತರಿಸಲಾಗುವ ಕಾಲಮಿತಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು ಹಾಗೂ ಸದರಿ ಸಂಪೂರ್ಣ ವಿವರಗಳನ್ನು ಪ್ರವೇಶ ದಾಖಲಾತಿ ಪ್ರಕ್ರಿಯೆ ಮುಕ್ತಾಯಗೊಂಡ 10 ದಿನಗೊಳಗಾಗಿ ಸಂಬಂಧಿಸಿದ ವಿಶ್ವವಿದ್ಯಾಲಯಗಳಿಗೆ ವರದಿ ಮಾಡತಕ್ಕದ್ದು, ತಪ್ಪಿದ್ದಲ್ಲಿ ವಿದ್ಯಾರ್ಥಿಗಳ ಪ್ರವೇಶ ದಾಖಲಾತಿಗೆ ಮಾನ್ಯ ಮಾಡತಕ್ಕದಲ್ಲ.
3. ಸರ್ಕಾರವು ವಿಧಿಸಿರುವ ಆಡಳಿತ ಶುಲ್ಕವನ್ನು ಹಾಗೂ ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಇತರೆ ಶುಲ್ಕಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.
4. ಸದರಿ ಸೀಟುಗಳನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಿಡತಕ್ಕದ್ದು.
5. ಹೈದ್ರಾಬಾದ್ ಕರ್ನಾಟಕದ ಮೀಸಲಾತಿ ಸೀಟುಗಳನ್ನು ನಿಯಮಾನುಸಾರ ಭರ್ತಿ ಮಾಡತಕ್ಕದ್ದು.

**I-Fee Structure for First Year B.Ed. (I & II Semester) Course for the Academic Year 2023-24**

| Sl. No | Fee structure/events | Fees to be paid by the student within State | Fees to be paid by the student outside State |
|---|---|---|---|
| 1 | Fee for converting Govt. to Management seat | 3000 | 3000 |

13/3/24

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು.

ಗೆ,
ಎಲ್ಲಾ ಸಂಯೋಜಿತ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

**ಪ್ರತಿ:**
1. ಕುಲಸಚಿವರು (ಮೌಲ್ಯಮಾಪನ) ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6. ಜಾಲತಾಣ ವಿಭಾಗ, ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಲು.
7. ಕಚೇರಿ ಪ್ರತಿ.